ಕೆರೆಗಳ ಪುನರುಜ್ಜೀವನ

239 (288) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) :–ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪ್ರಸಕ್ತ ಸಾಲಿನಲ್ಲಿ ಬೀದರ ಜಿಲ್ಲೆಯಲ್ಲಿನ ಯಾವ ಯಾವ ಸಣ್ಣ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಯೋಜನೆ ರೂಪಿಸಲಾಗಿದೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಆ) ರೂಪಿಸಿದ್ದಲ್ಲಿ, ಎಷ್ಟು ಹಣದ ಅಗತ್ಯವಿದೆ ;

ಇ) ಯಾವ ಯೋಜನೆಯಡಿಯಲ್ಲಿ ಈ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮಗಳಿಗೆ ನೆರವನ್ನು ನೀಡಲಾಗುವುದು ;

ಈ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಷ್ಟು ಸಮಯ ನಿಗದಿಪಡಿಸಲಾಗಿದೆ ?

ಶ್ರೀ ಗೋವಿಂದ ಎಂ. ಕಾರಜೋಳ, (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :–

(ಅ) ಮತ್ತು (ಆ) ಬೀದರ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗೆ ಕೇಂದ್ರ ಪುರಸ್ಕೃತ ಯೋಜನೆಯಾದ ದುರಸ್ತಿ, ನವೀಕರಣ ಮತ್ತು ಪುನರುಜ್ಜೀವನ (ಆರ್.ಆರ್ &ಆರ್) ಅಡಿ ರೂಪಿಸಲಾಗಿರುವ ಯೋಜನೆಯ ವಿವರಗಳು ಕೆಳಕಂಡಂತಿದೆ:

ತಾಲ್ಲೂಕು	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಅಚ್ಚುಕಟ್ಟು (ಹೆ.ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಸಂಭವನೀಯ ದಿನಾಂಕ	ಪ್ರಸ್ತುತ ಹಂತ
ಬಸವ ಕಲ್ಯಾಣ	1) ಬೇಟಬಾಲಕುಂದಾ ಕೆರೆ ನವೀಕರಣ	190.00	1060	31.3.12	ಡಿಪಿಆರ್ ಒಪ್ಪಿಗೆ
ಭಾಲ್ಕಿ	2) ಭಾಲ್ಕಿ ಕೆರೆ ನವೀಕರಣ	68.00	255	31.3.12	ಪಡೆದಿದೆ
ಭಾಲ್ಕಿ	3) ಹಾಲಹಿಪ್ಪರಗಾ ಕೆರೆ ನವೀಕರಣ	105.00	360	3.3.12	ಪೂರ್ವ
ಭಾಲ್ಕಿ	4) ಧನ್ನೂರಾ ಕೆರೆ ನವೀಕರಣ	50.00	134	31.3.12	ಭಾವಿ
ಔರಾದ	5) ಕಮಾಲನಗರ ಕೆರೆ ನವೀಕರಣ	85.00	174	31.3.12	ಸಿದ್ಧತೆ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ
	ಒಟ್ಟು	498.00	1983		

(ಇ) ಮತ್ತು (ಈ) ಮೇಲ್ಕಂಡ ಯೋಜನೆಯಲ್ಲದೆ, ವಿಶ್ವಬ್ಯಾಂಕ್ ನೆರವಿನಡಿ ಜಲಸಂವರ್ಧನೆ ಯೋಜನಾ ಸಂಘದ ಮೂಲಕ ಬೀದರ್ ಜಿಲ್ಲೆಯ 40 ಸಣ್ಣ ನೀರಾವರಿ ಹಾಗೂ 7 ಜಿಲ್ಲಾ ಪಂಚಾಯತ್ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಇವುಗಳ ಪೈಕಿ 30 ಕೆರೆಗಳ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ಐಟಿಡಿಪಿ) ಗಳು ಅನುಮೋದನೆಗೊಂಡಿದ್ದು, ಇದರ ಒಟ್ಟು ಮೊತ್ತ 996.68 ಲಕ್ಷ ರೂ.ಗಳು ಬಾಕಿ 17 ಕೆರೆಗಳ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ ಸಿದ್ಧತಾ ಕಾರ್ಯವು ಪ್ರಗತಿಯಲ್ಲಿದೆ. ಈ ಎಲ್ಲಾ ಕಾಮಗಾರಿಗಳನ್ನು ಜನವರಿ 2012ರೊಳಗೆ ಪೂರ್ಣಗೊಳಿಸಲು ಅವಧಿ ನಿಗದಿಪಡಿಸಲಾಗಿದೆ.

ಸಣ್ಣ ನೀರಾವರಿ ಕಾಮಗಾರಿಗಳು

241 (290) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) :–ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಏತ ನೀರಾವರಿ ಯೋಜನೆಗಳು, ಚೆಕ್ ಡ್ಯಾಂಗಳು ಹಾಗೂ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಈ ಪೈಕಿ ಬೀದರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹಾಗೂ ಭಾಲ್ಕಿ ತಾಲ್ಲೂಕಿನ ಯಾವ ಯಾವ ಸ್ಥಳದಲ್ಲಿ ಏತ ನೀರಾವರಿ ಯೋಜನೆಗಳು, ಚೆಕ್ ಡ್ಯಾಂಗಳು ಹಾಗೂ ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿವುದು ;

ಇ) ಈ ಯೋಜನೆಗಳಿಗೆ ತಗುಲುವ ವೆಚ್ಚವೆಷ್ಟು ; ಹಾಗೂ ಅಂದಾಜು ವೆಚ್ಚವನ್ನು ತಯಾರಿಸಲಾಗಿದೆಯೇ (ಪೂರ್ಣ ವಿವರಗಳನ್ನು ಒದಗಿಸುವುದು) ;

ಈ) ಇವುಗಳ ನಿರ್ಮಾಣದ ನಂತರ ಈ ಭಾಗದ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ ?

ಶ್ರೀ ಗೋವಿಂದ ಎಂ. ಕಾರಜೋಳ, (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :–

ಅ) 2010–11ನೇ ಸಾಲಿನಲ್ಲಿ ಏತ ನೀರಾವರಿ ಯೋಜನೆಗಳು, ಚೆಕ್ ಡ್ಯಾಂಗಳು, ಬ್ಯಾರೇಜುಗಳು, ಪಿಕಪ್‌ಗಳನ್ನು ನಿರ್ಮಿಸಲು ಸಣ್ಣ ನೀರಾವರಿ ಇಲಾಖೆಗೆ ಆಯವ್ಯಯದಲ್ಲಿ ರೂ. 14570.90 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

ಆ) ಮತ್ತು ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) 2828 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತದೆ.